ದಿ: 21-04-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ನೀಡಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ವಿ.ಆರ್.ಕೆ. ವಕೀಲರಿಂದ ವಾದಿಯ ಪರವಾಗಿಃ**

15. ಈ ದಿನ ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣೆಗೆ ಬದಲಾಗಿ ಪ್ರಮಾಣಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿವೆ ಮತ್ತು ಸತ್ಯವಾಗಿವೆ. ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ಈಗಾಗಲೇ ಗುರುತಿಸಿರುವಂತಹ ನಿಪಿ-1 ರಿಂದ 5 ರ ದಾಖಲೆಗಳನ್ನು ನೋಡಿ ಗುರುತಿಸುತ್ತೇನೆ.

**ಪಾಟೀ ಸವಾಲುಃ ಶ್ರೀ ಡಿ.ಹೆಚ್.ಪಿ., ವಕೀಲರಿಂದ ಪ್ರತಿವಾದಿಯ ಪರವಾಗಿಃ**

16. ಪ್ರತಿವಾದಿಗೆ ಶ್ರೀ ವೀರಭದ್ರೇಶ್ವರ ಪ್ರಾವಿಜನ್ ಸ್ಟೋರ್ ಗಾಗಿ ಸಾಲವನ್ನು ನೀಡಲಾಗಿತ್ತು. ಕೊನೆಯದಾಗಿ ದಿಃ 11-11-2025 ರಂದು ಪ್ರತಿವಾದಿಯವರ ರವಿ ಜನರಲ್ ಸ್ಟೋರ್ ಗೆ ಭೇಟಿ ನೀಡಲಾಗಿತ್ತು. ನಮ್ಮ ಶಾಖೆಯಿಂದ ಒಂದೇ ಸಲ ನಾವು ಸುಮಾರು 15 ಜನರಿಗೆ ಸಾಲವನ್ನು ಮಂಜೂರು ಮಾಡಿದ್ದೇವೆ ಅಂದರೆ ಸರಿಯಲ್ಲ. ಪ್ರತಿವಾದಿಗೆ ನಾವು ಸಾಲವನ್ನು ದಿಃ 27-11-2017 ರಂದು ನೀಡಿರುತ್ತೇವೆ. ಪ್ರತಿವಾದಿಯು ರಾಣೇಬೆನ್ನೂರಿನವರು ಅಂದರೆ ನಿಜ. ರಾಣೇಬೆನ್ನೂರಿನಲ್ಲಿ ಸಹ SBI ಶಾಖೆ ಇದೆ ಅಂದರೆ ನಿಜ. ಪ್ರತಿವಾದಿಗೆ ನಾವು ರಾಣೇಬೆನ್ನೂರಿನ SBI ಶಾಖೆಯಿಂದ ಸಾಲ ಪಡೆಯಲು ಹೇಳಿಲ್ಲ ಅಂದರೆ ಪ್ರತಿವಾದಿಗೆ SBA ಖಾತೆ ನಮ್ಮ ಶಾಖೆಯಲ್ಲಿತ್ತು. ಆ ದಿನ ನಾವು ಸಾಲವನ್ನು ಮಂಜೂರು ಮಾಡುವ ಕಾಲಕ್ಕೆ ಪ್ರತಿವಾದಿಯಿಂದ ಸಾಲದ ಕರಾರು ಪತ್ರ, ಸಾಲದ ಅರ್ಜಿ, Project report ನೇದರ ಮೇಲೆ ಸಹಿ ಪಡೆದುಕೊಂಡಿದ್ದೇವೆ. ಖಾಲಿ ದಾಖಲೆಗಳ ಮೇಲೆ ನಾವು ಸಹಿ ಪಡೆದುಕೊಂಡಿದ್ದೇವೆ ಅಂದರೆ ಸರಿಯಲ್ಲ. ಸಾಕ್ಷಿದಾರರು ಹೇಳುತ್ತಾರೆ ಸಾಲದ ದಾಖಲೆಗಳು printed ಇರುತ್ತವೆ. SBI ನಲ್ಲಿ ಇನ್ನೊಂದು SBI Life Insurance ಗೆ ಪ್ರತಿವಾದಿಗೆ ನಾವು ಮಂಜೂರು ಮಾಡಿದ ಸಾಲವನ್ನು

ಅದಕ್ಕೆ ಜಮಾ ಮಾಡಿದ್ದೇವೆ ಅಂದರೆ ಸರಿಯಲ್ಲ. ಸಾಕ್ಷಿದಾರರು ಹೇಳುತ್ತಾರೆ Stock Insurance ಇರುತ್ತದೆ. ಪ್ರತಿವಾದಿಯು ಆ ರೀತಿ ಮಾಡುವುದು ಬೇಡ ಅಂತ ಹೇಳಿದರೂ ಸಹ ಒತ್ತಾಯ ಪೂರ್ವಕವಾಗಿ ನಾವು ಮಾಡಿದ್ದೇವೆ ಅಂದರೆ ಸರಿಯಲ್ಲ. ನಮಗೆ ಎಷ್ಟು ಬೇಕಾಗಿತ್ತೋ ಅದನ್ನು ನಾವು ನಮೂದು ಮಾಡಿ ಆ ದಾಖಲೆಗಳ ಮೇಲೆ ಸಹಿ ಪಡೆದುಕೊಂಡಿದ್ದೇವೆ ಅಂದರೆ ಸರಿಯಲ್ಲ.

ಪ್ರತಿವಾದಿಯು ಮರುಪಾವತಿಸಿದ ಹಣವನ್ನು ಅವರ ಸಾಲದ ಖಾತೆಗೆ ಸೇರಿಸಿಕೊಂಡಿರುವುದಿಲ್ಲ ಅಂದರೆ ಸರಿಯಲ್ಲ. ಪ್ರತಿವಾದಿಯು ನಮಗೆ ಯಾವುದೇ ಹಣ ಕೊಡುವುದು ಬಾಕಿ ಇಲ್ಲ ಅಂದರೆ ಸುಳ್ಳು.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.